ಆ) ಎರಡು ಮಾರಾಟ ಮಳಿಗೆಗಳು ಲಾಭದಾಯಕವಾಗಿವೆ;

ಇ) ಒಂದು ಮಾರಾಟ ಮಳಿಗೆಯನ್ನು ಸ್ಥಾಪಿತವಾಗಬೇಕಾದಲ್ಲಿ, ಜನರಿಗೆ ಶೈತೀಕರಿಸಿದ ಕಡಲ ಮೀನನ್ನು ಪರಿಚಯಿಸಲು ಕನಿಷ್ಟ ಪಕ್ಷ ೫ ವರ್ಷಗಳ ಕಾಲ ಬೇಕಾಗುವುದು. ಈ ಮೇಲಿನ ಎಲ್ಲಾ ಮಾರಾಟ ಮಳಿಗೆಗಳು ಸ್ಥಾಪಿತವಾಗಿ ಇನ್ನು ಐದು ವರ್ಷವಾಗಿರುವುದಿಲ್ಲ. ಆದ್ದರಿಂದ ಇವುಗಳ ಕಾರ್ಯ ಚಟುವಟಿಕೆಗಳನ್ನು ಮೊದಲ ಐದು ವರ್ಷಗಳ ಕಾಲಕ್ಕೆ ಗಮನಿಸಿದಂತರ ಅಗತ್ಯವಾದಲ್ಲಿ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು.

ಈ) ೧೯೯೦-೯೧ನೇ ವರ್ಷದಲ್ಲಿ ಎರಡು ಮೀನು ಉಪಹಾರ ಗೃಹಗಳನ್ನು ಸ್ಥಾಪಿಸುವ ಯೋಜನೆ ಇದೆ.

ಉ) ಅಲಸೂರು ಕೆರೆಯ ಬಳಿ ಮತ್ತು ಶಾಸಕರ ಭವನದಲ್ಲಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀಮತಿ ಮನೋರಮಾ ಮಧ್ವರಾಜ್ (ಸಹಕಾರ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ೧೯-೩-೯೦ರ ಲಿಖಿತ ಮೂಲಕ ಉತ್ತರಿಸುವ ಒಂದನೇ ಪಟ್ಟಿಯಲ್ಲಿರುವ ಐದು ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿ ಮೀನು ರಫ್ತು ಮಾಡುವುದರಿಂದ ಗಳಿಸಿದ ವಿದೇಶಿ ವಿನಿಮಯದ ಬಗ್ಗೆ

೨. ಶ್ರೀ ಜಿ. ರಾಜುಗೌಡ (ಹನೂರು),—ಮಾನ್ಯ ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ೧೯೮೭-೮೮, ೧೯೮೮-೮೯, ೧೯೮೯-೯೦ರಲ್ಲಿ ಫೆಬ್ರುವರಿ ಕೊನೆಯವರೆಗೆ ರಾಜ್ಯದಿಂದ ಎಷ್ಟು ಮೆಟ್ರಿಕ್ ಟನ್ ಮೀನು ರಫ್ತು ಮಾಡಲಾಗಿದೆ, ಹಾಗೂ ಪ್ರತಿ ವರ್ಷ ಗಳಿಸಿದ ವಿದೇಶಿ ವಿನಿಮಯ ಎಷ್ಟು ?

ಆ) ಇತ್ತೀಚಿನ ದಿನಗಳಲ್ಲಿ ಮೀನಿನ ಬೇಡಿಕೆಯು ಹೆಚ್ಚಾಗಿರುವುದರಿಂದ, ಈ ಬೇಡಿಕೆಯನ್ನು ಸರಿದೂಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಆ) ರಾಜ್ಯದಲ್ಲಿ ಮೀನು ರಫ್ತು ಮಾಡುವುದರಿಂದ, ಗಳಿಸಿದ ವಿದೇಶಿ ವಿನಿಮಯ ಮತ್ತು ರಫ್ತಿನ ಪ್ರಮಾಣ ಈ ಕೆಳಕಂಡಂತಿದೆ.—

ವರ್ಷ	ರಫ್ತಿನ ಪ್ರಮಾಣ (ಮೆಟ್ರಿಕ್ ಟನ್‌ಗಳಲ್ಲಿ)	ಅದರ ಮೌಲ್ಯ (ವಿದೇಶಿ ವಿನಿಮಯ) (ಲಕ್ಷ ರೂ. ಗಳಲ್ಲಿ)
೧೯೮೭-೮೮	೨,೭೪೪	೧,೬೫೭.೫೬
೧೯೮೮-೮೯	೪,೫೫೭	೨,೭೦೦.೨೮
೧೯೮೯-೯೦ (ಫೆಬ್ರುವರಿ ೯೦ರ ವರೆಗೆ)	೨,೧೪೭	೧,೧೩೮.೮೧

ಆ) ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವ ಬೇಡಿಕೆಯನ್ನು ಸರಿದೂಗಿಸಲು, ಸರ್ಕಾರವು ವಿವಿಧ ಯೋಜನೆಗಳಡಿಯಲ್ಲಿ ರೂ. ೬೩೭.೫೮ ಲಕ್ಷಗಳನ್ನು ವೆಚ್ಚ ಮಾಡಲು ನಿಗದಿ ಮಾಡಿದೆ. ಈ ಯೋಜನೆಗಳೆಂದರೆ.—

೧) ಮೈಸೂರು ಜಿಲ್ಲೆಯಲ್ಲಿ ಎನ್.ಸಿ.ಡಿ.ಸಿ. ನೆರವಿನ ಜಲಾಶಯ ಅಭಿವೃದ್ಧಿ ಯೋಜನೆ.

೨) ಭದ್ರಾ ಪ್ರಾಜೆಕ್ಟ್ ನಲ್ಲಿ ರಾಷ್ಟ್ರೀಯ ಮೀನು ಮರಿ ಉತ್ಪಾದನಾ ಕೇಂದ್ರ ಸ್ಥಾಪನೆ.

೩) ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಸ್ಥಾಪನೆ ಮತ್ತು